ಧೈರ್ಯವಾಗಲಿಲ್ಲ. ಅಷ್ಟರಲ್ಲಿ ಸದ್ದೂ ಅಡಗಿತು, ಇದ್ದ ಒಳಗಿನ ಬೆಳಕೂ ನಂದಿಹೋಯಿತು. ಹೇಗೋ ಹೊರಕ್ಕೆ ಓಡಿಬಂದು ಕಾರಿನ ಶೆಡ್ಡಿನಲ್ಲಿ ಮುಗ್ಗರಿಸಿ ಬಿದ್ದೆ. ಮರುನಿಮಿಷದಲ್ಲಿ ಒಬ್ಬ ವ್ಯಕ್ತಿ ಗೋಡೆಯನ್ನು ಆದರಿಸುತ್ತ ಹೊರಗೆ ಹೋದದ್ದನ್ನು ಅಸ್ಪಷ್ಟವಾಗಿ ನೋಡಿದೆ. ಆತ ಮೆಟ್ಟಲಿಳಿಯುತ್ತ, ಜಾರುತ್ತ, ಏಳುತ್ತ ರಸ್ತೆಯ ಕಡೆಗೆ ಹೋದ. ಕಾರು ಹೊರಟುಹೋದ ಸದ್ದು ಕೇಳಿಸಿತು. ನನಗೆ ಅಲ್ಲಿ ನಿಲ್ಲುವ ಧೈರ್ಯವಾಗಲೀ ಒಳಗೆ ಹೋಗಿ ಬೆಳಕು ಉರಿಸುವ ಸಾಮರ್ಥ್ಯವಾಗಲೀ ಉಳಿದಿರಲಿಲ್ಲ. ಒಂದು ವೇಳೆ ಅಮ್ಮಾವ್ರಿಗೆ ಏನಾದ್ರೂ ಆಗಿದ್ದರೆ ನನ್ನ ಕತೆ ಮುಗಿದಂತೆಯೇ. ಅಷ್ಟು ಮನಸ್ಸಿಗೆ ಬಂದದ್ದೇ ತಡ; ಮೆಟ್ಟಲಿಳಿದು ಕೊಡವೂರ ಮಾರ್ಗವಾಗಿ ಒಂದೇ ಸಮನೆ ಓಡತೊಡಗಿದೆ. ಎದುರುಗಡೆಯಿಂದ ಮೋಟಾರ್ ಬೈಕೊಂದು ಬರುತ್ತಿತ್ತು. ಮುಖ ಮರೆಸಲೆಂದು ಬದಿಗೆ ಹಾರಿ ಬೇಲಿಯ ಮೇಲೆ ಬಿದ್ದುಬಿಟ್ಟೆ'.

ದೀಪೂವಿನ ಮಾತನ್ನು ತಡೆದ ನಟರಾಜ್‌ರು, 'ಯಾಕೆ ಮುಖ ಮರೆಸಿಕೊಳ್ಳಬೇಕಿತ್ತು' ಎಂದು ಪ್ರಶ್ನಿಸಿದರು.

'ನಾನು ಮನೆಗೆ ಬಂದದ್ದು, ಅಲ್ಲಿಂದ ಹಿಂದಿರುಗಿದ್ದು ಯಾರಾದರೂ ಕಂಡರೆ? ನನ್ನನ್ನೇ ಕೊಲೆಗಾರನೆಂದು ತಿಳಿಯೋ ಅಪಾಯವಿತ್ತು.'

'ಈಗಲಾದರೂ ಅಷ್ಟೇನೆ' ಸಬ್‌ಇನ್ಸ್‌ಪೆಕ್ಟರ್ ರೇಗಿದರು.

'ಇಲ್ಲಾ ಸರ್, ನಾನು ಕೊಲೆ ಮಾಡಿಲ್ಲ.'

'ಬಾಯಿ ಮುಚ್ಚೋ ಹಲ್ಕಟ್ ನನಮಗನೆ' ಇನ್ಸ್‌ಪೆಕ್ಟರ್ ಕೈಯೆತ್ತಿ ಮುಂದೆ ಬಂದರು.

'ಇರಲಿ ಸಬ್‌ಇನ್ಸ್‌ಪೆಕ್ಟರ್, ಹೇಳ್ಲಿ ಅವ. ಬಾಯಿ ಮುಚ್ಚಿದ್ರೆ ಹೇಗೆ ಹೇಳ್ತಾನೆ?' ಗಂಭೀರ ಸನ್ನಿವೇಶದಲ್ಲೂ ನಟರಾಜ್ ಕಿಸಕ್ಕನೆ ನಕ್ಕರು.

'ಅವ ಏನ್ ಹೇಳ್ತಾನೆ ಸರ್, ನಾಲ್ಕು ಒದ್ದರೆ ಎಲ್ಲ ಹೇಳ್ತಾನೆ. ಇವ ಅಲ್ಲೇ ಇದ್ದನಂತೆ, ಕೊಲೆಗಾರ ಇವ್ನ ಎದುರುಗಡೆಯಿಂದ್ಲೇ ಗೋಡೆ ಹಿಡ್ಕೊಂಡು ಹೋಗಿ ಬಿಟ್ನಂತೆ. ನಂಬೋ ಮಾತಾ ಇದು? ನೀವು ಹೀಗೆ ಕತೆ ಕೇಳ್ತಾ ಕೂತ್ರೆ ಅವ ಎಷ್ಟೂ ಹೇಳ್ತಾನೆ – ನನಗೆ ಬಿಡಿ ಸರ್' ಇನ್ಸ್‌ಪೆಕ್ಟರ್ ಮತ್ತೂ ರೇಗಾಡಿದರು. ನಟರಾಜ್ ವಿಚಾರಿಸಿಕೊಳ್ಳುವ ರೀತಿ ಅವರಿಗೆ ಎಳ್ಳಷ್ಟೂ ಹಿಡಿಸಲಿಲ್ಲ.

'ಯಾರದ್ದು ಆ ಮೋಟಾರ್ ಬೈಕ್?' ನಟರಾಜ್ ಇನ್ನೊಂದು ಪ್ರಶ್ನೆ ಎಸೆದರು.

'ಕತ್ತಲೆಯಲ್ಲಿ ಗೊತ್ತಾಗಲಿಲ್ಲ ಸರ್. ಆದ್ರೆ ಆ ಸದ್ದಿನ ಬೈಕ್ ಕೊಡವೂರಲ್ಲಿ ಒಬ್ರ ಹತ್ರಾನೇ ಇರೋದು ಪವನ್ ಅಂತ ಸಾ.'

'ಬೈಕ್ ಯಾವ ಕಡೆ ಹೋಯಿತು, ಏನಾದ್ರೂ ಅಂದಾಜಿದೆಯಾ?' ನಟರಾಜ್ ತಾಳ್ಮೆಗೆಡದೆ ಕೇಳಿದರು.

'ದನಿಯೋರ ಮನೆ ಕಡೆಯಾಗಿ ಹೋಯಿತು. ಅಲ್ಲಿಂದ ಮುಂದೆ ಬಲಕ್ಕೆ ತಿರುಗಿದರೆ ರಸ್ತೆ ಕರಿಮಾಯಿ ಗುಡ್ಡದ ಕಡೆ ಹೋಗುತ್ತದೆ. ಅಲ್ಲಿಗೇ ಹೋಗಬೇಕೆಂದಿಲ್ಲ. ಎಡಕ್ಕೆ ತಿರುಗಿದರೆ ಅಲ್ಲೂ ಒಂದೆರಡು ಮನೆಗಳಿವೆ.'

'ನಿಲ್ಲು! ಬೈಕ್ ಪ್ರೊಫೆಸರ ಮನೆ ದಾಟಿ ಮುಂದಕ್ಕೆ ಹೋಗಲಿಲ್ಲ. ಕಪಾಟಿನೊಳಗಿಂದ ಚಿನ್ನ ತೆಗೆದು, ತರಕಾರಿ ತಂದಿದ್ದ ಚೀಲ ಖಾಲಿ ಮಾಡಿ ಅದರಲ್ಲಿ ತುಂಬಿಸಿ ಪವನ್ ಕೈಯಲ್ಲಿ ಕೊಟ್ಟು ಕಳುಹಿಸಿದವ್ನೇ ನೀನು!'

'ಇಲ್ಲ ಸಾರ್. ಅದು ಯಾರ ಬೈಕೂಂತಾನೂ ಗೊತ್ತಿಲ್ಲ. ಯಾರಿಗೂ ಯಾವ ಚೀಲಾನೂ ಕೊಟ್ಟಿಲ್ಲ. ಸುಮ್ಮನೆ ಯಾಕೆ ಸರ್ ನನ್ನ ಮೇಲೆ ದೂರು ಹಾಕ್ತೀರಾ? ವೇಂಡ ಸಾರ್, ಬಿಟ್ಟುಬಿಡಿ ಸಾರ್.'

'ನೀನು ಮತ್ತೇನು ಮಾಡಿದೆ?'

'ಬೈಕ್ ದಾಟಿ ಹೋಗುವವರೆಗೆ ಅಲ್ಲೇ ಅವಿತಿದ್ದೆ. ಆ ಬಳಿಕ ನೇರವಾಗಿ ಕೊಡವೂರಿಗೆ ಬಂದೆ. ಸೋಮಾರಿಕಟ್ಟೆಗಿಂತ ದೂರದಲ್ಲಿ ಒಂದು ಮರದ ಮರೆಯಲ್ಲಿ ನಿಂತುಕೊಂಡೆ. ಯಾವುದಾದರೂ ವಾಹನ ಸಿಗುತ್ತೋಂತ ಕಾದೆ. ಲಾರಿಯೊಂದು ವೀರನಗರದ ಕಡೆಗೆ ಹೋಗುತ್ತಿತ್ತು. ಕೈ ತೋರಿಸಿದಾಗ ನಿಂತಿತು. ಅದರಲ್ಲಿ ವೀರನಗರಕ್ಕೆ ಬಂದೆ. ಅವರಿವರ ಕಣ್ಣು ತಪ್ಪಿಸಿ ಹೇಗೋ ಬಂದು ತಲಚೇರಿಗೆ ತಲುಪಿದೆ.'

'ತಲಚೇರಿಗೆ ಹೋಗೋದಕ್ಕೆ ಬೇಕಾದಷ್ಟು ಹಣ ಎಲ್ಲಿಂದ ಸಿಕ್ತು?'

'ವೀರನಗರದಲ್ಲಿ ನನ್ನದೇ ಒಂದು ಬ್ಯಾಂಕ್ ಅಕೌಂಟ್ ಇತ್ತು. ದನಿಯೋರೇ ಮಾಡಿಸಿ ಕೊಟ್ಟದ್ದು. ಅಂದು ಬೆಳಿಗ್ಗೆ ವೀರನಗರಕ್ಕೆ ಬಂದವನೇ ಅಮ್ಮಾವ್ರಿಗೆ ಮುಖ ತೋರಿಸಲು ನಾಚಿಕೆಯಾಗಿ ಸದ್ಯಕ್ಕಂತೂ ಊರು ಬಿಡುವುದಾಗಿ ತೀರ್ಮಾನಿಸಿದ್ದೆ. ಬ್ಯಾಂಕ್‌ನಲ್ಲಿದ್ದ ಹಣದಿಂದ ಖರ್ಚಿಗೆ ಬೇಕಾದಷ್ಟು ತೆಗೆದಿಟ್ಟುಕೊಂಡಿದ್ದೆ.'

'ಸುಳ್ಳು ಬೊಗಳ್ತೀಯಾ. ಯಜಮಾನಿ ಮೇಲೆ ಅತ್ಯಾಚಾರಮಾಡಿ ಅವಳನ್ನು ಕೊಂದು ಊರು ಬಿಡೋದಕ್ಕೆ ತೀರ್ಮಾನಿಸಿಯೇ ನೀನು ಹಣ ಡ್ರಾ ಮಾಡಿದ್ದೆ. ನಿನ್ನ ಪಾಸ್ ಬುಕ್‌ನ ಪ್ರತಿ ಇಲ್ಲಿದೆ ನೋಡು. ಅಕೌಂಟ್ ಕ್ಲೋಸ್ ಮಾಡಿದ್ದೀಯಾ' ಸಬ್‌ಇನ್ಸ್‌ಪೆಕ್ಟರ್ ಪಾಸ್‌ಬುಕ್‌ನ ಪ್ರತಿಯನ್ನು ದೀಪೂನ ಮುಖಕ್ಕೆ ಎಸೆದರು.

'ಅದೂ.. ಅದೂ...' ದೀಪೂನ ಬಾಯಿಂದ ಮಾತೇ ಹೊರಡಲಿಲ್ಲ.

'ಯಾವುದು? ಇಷ್ಟೆಲ್ಲ ಹೇಳ್ತೀಯಲ್ಲ, ಕೊಲೆ ಮಾಡಿದವ ಯಾರೂಂತ ಯಾಕೆ ಹೇಳೋದಿಲ್ಲ? ಕಾರೂ ಗೊತ್ತಿಲ್ಲ, ಬೈಕೂ ಗೊತ್ತಿಲ್ಲ.

ಸೇಡು ತೀರಿಸಿದೆ, ನೀನೆ ಕೊಲೆ ಮಾಡಿಬಿಟ್ಟು ಕಾರು–ಬೈಕು ಅನ್ತೀಯ. ಅದ್ಯಾರ ಬೈಕೂಂತ ಗೊತ್ತಿಲ್ವೇನೊ ನಿಂಗೆ?'

'ಅದು ಪವನ್‌ನ ಬೈಕು ಇರ್ಲೂಬಹುದು. ಅದರ ಸದ್ದು ಕೇಳಿ ಗೊತ್ತು. ಅಮ್ಮಾವ್ರನ್ನು ಕೇಳಿಕೊಂಡು ಆ ಬೈಕು ಮನೆಗೆ ಬರ್ತಿತ್ತು. ಅಮ್ಮಾವ್ರಿಗೂ ಆ ಬೈಕಿನ ಸದ್ದೆಂದ್ರೆ ತುಂಬ ಇಷ್ಟ. ಯಾವಾಗ್ಲೂ ಬುಲೆಟ್ ಬೈಕ್, ಬುಲೆಟ್ ಬೈಕ್ ಅನ್ತಿರ್ತಾರೆ.'

'ಮತ್ತೆ ಬೇರೆ ಕಥೆ ಹೇಳ್ಳಿಕ್ಕೆ ಶುರು ಮಾಡಿದ. ಇವ್ನಿಗೆ ಏರೋಪ್ಲೇನೇ ಗತಿ. ಎಲ್ಲ ಬಾಯ್ಬಿಡ್ತಾನೆ' ಇನ್ಸ್‌ಪೆಕ್ಟರ್ ತಾಳ್ಮೆ ಕಳೆದುಕೊಂಡರು.

'ಹಾಗಾದ್ರೆ ಆ ಬೈಕ್ ನಿಮ್ಮ ಮನೆಗೇ ಬಂದಿತ್ತು. ಬೊಗಳೋ ಕತ್ತೆ.'

'ನನಗೆ ನಿಜವಾಗಿಯೂ ಗೊತ್ತಿಲ್ಲ ಸರ್. ನಾನು ನೋಡಿಲ್ಲ.'

'ಇಷ್ಟೆಲ್ಲ ನೋಡಿದ್ದೀಯಾ. ಅದನ್ನು ಮಾತ್ರ ನೋಡಿಲ್ಲ. ಅಲ್ವೆ?' ಇನ್ಸ್‌ಪೆಕ್ಟರ್ ಮತ್ತೆ ಗುಡುಗಿದರು. ಅದು ತನಕ ಹೆಚ್ಚಿನ ಪ್ರಶ್ನೆಗಳನ್ನೇನೂ ಕೇಳಿರದ ಡಿ.ಎಸ್.ಪಿ.ಯವರು ಏನೋ ಹೊಳೆದವರಂತೆ ಮಾತು ಕೈಗೆತ್ತಿಕೊಂಡರು.

'ಒಂದ್ನಿಮಿಷ ಇನ್ಸ್‌ಪೆಕ್ಟರ್! ನನಗೆ ಬಿಡಿ. ಯಜಮಾನಿ ನಿನ್ನ ಮೇಲೆ ಕೈಮಾಡಬಹುದೂಂತ ನೀನು ಅಂದುಕೊಂಡಿರಲಿಲ್ಲ. ಇಷ್ಟು ದಿನಗಳಿಂದ ನಿನ್ನೊಳಗೆ ಆಕೆಯ ಬಗ್ಗೆ ಮೂಡಿದ್ದ ಆಸೆ ಒಮ್ಮೆಲೆ ನಿರಾಸೆಯಾಗಿ ಪರಿಣಮಿಸಿದಾಗ ನಿನಗದನ್ನು ಸಹಿಸಿಕೊಳ್ಳಲಾಗಲಿಲ್ಲ.

ಮೇಲಾಗಿ ಏಟು ತಿಂದು ಅವಮಾನವಾಗಿತ್ತು. ಸೇಡು ತೀರಿಸಿಯೇ ಊರು ಬಿಡಬೇಕೆಂದು ತೀರ್ಮಾನಿಸಿದ್ದೆ. ಅದಕ್ಕೇ ವ್ಯವಸ್ಥಿತವಾಗಿ ಬ್ಯಾಂಕಿನಲ್ಲಿದ್ದ ಹಣವನ್ನೆಲ್ಲ ತೆಗೆದುಕೊಂಡು ಬಂದು ರಾತ್ರಿಯಾದ ಮೇಲೆ ಮನೆಗೆ ಹೋಗಿ ಆಕೆಯ ಮೇಲೆ ಅತ್ಯಾಚಾರ ಮಾಡಿ ಕೊಲೆಗೈದು ಊರು ಬಿಟ್ಟೆ. ಬೈಕ್ ಆ ಕಡೆ ಬಂದಿದ್ಯಾಂತ ನಿನ್ನನ್ಯಾರಾದ್ರೂ ಕೇಳಿದ್ರ? ನೀನು ಯಾಕೆ ಬೈಕಿನ ಕತೆ ಹೇಳಿದೇಂತಾನೂ ಗೊತ್ತಾಯ್ತು? ಡಾ. ಗಣೇಶ್‌ರ ಕಾರಿನ ಕತೆ. ಪವನ್‌ನ ಬೈಕಿನ ಕತೆ.

ಯಾವ ಕಾರೂ ಇಲ್ಲ; ಯಾವ ಬೈಕೂ ಇಲ್ಲ' ಡಿಎಸ್‌ಪಿ ನಿಖರವಾಗಿ ಹೇಳುತ್ತಿದ್ದಂತೆಯೇ ಇನ್ಸ್‌ಪೆಕ್ಟರ್ ದೀಪೂನ ಬೆನ್ನ ಮೂಳೆ ಮುರಿದೇ ಹೋಗುವಂತೆ ಬೂಟುಗಾಲಿಂದ ಒದ್ದದ್ದರಲ್ಲಿ ಆತ ಮಾರು ದೂರ ಹೋಗಿ ಬೀಳುತ್ತಾ 'ದಮ್ಮಯ್ಯ ಸಾರ್, ಜೀಸಸ್ನಾಣೆಗೂ ಇಲ್ಲ ಸಾರ್, ನಾನಲ್ಲ ಸಾರ್' ಎನ್ನುತ್ತ ದೊಪ್ಪನೆ ಬಿದ್ದ.

ಇನ್ಸ್‌ಪೆಕ್ಟರ್ ಅವನ ಕಾಲರ್ ಹಿಡಿದು ಮೇಲೆತ್ತುತ್ತಾ, 'ಹಾಗಾದ್ರೆ ನಿನಗೂ ಪವನ್‌ಗೂ ಸಂಬಂಧ ಇತ್ತು. ಮನೆಯೊಳಗೆ ಚಿನ್ನಾಭರಣಗಳಿದ್ದುದು ನಿಮ್ಮಿಬ್ಬರಿಗೂ ಗೊತ್ತಿತ್ತು. ಬೈಕ್‌ನಲ್ಲಿ ಬಂದವ ಯಾರೂಂತ ನಿನಗೆ ಗೊತ್ತಿತ್ತು. ನಿನ್ನ ಮೇಲೆ ಬರೋ ಅಪವಾದವನ್ನು ತಪ್ಪಿಸಲಿಕ್ಕೆ ಸದ್ಯಕ್ಕಂತೂ ಪವನ್‌ನ ಕೈಯಲ್ಲಿ ಚಿನ್ನಾಭರಣಗಳಿರಲೀಂತ ಅವನಿಗೆ ವಹಿಸಿಕೊಟ್ಟೆ. ನಿಮ್ಮದಿಬ್ಬರದು ಪಾಲಿನ ವ್ಯವಹಾರ. ಕೊಡವೂರಿನಲ್ಲಿ ಚಿನ್ನವಿರಿಸುವುದು ಕಷ್ಟವೆಂದಾದಾಗ ಆತ ಮತ್ತೆ ನಿನ್ನ ಕಡೆಗೇ ಹೊರಟಿದ್ದ.'

ಆತನ ಬಾಯಿ ಬಿಡಿಸುವುದಕ್ಕೆ ನಟರಾಜ್ ಇನ್ನೂ ಕೆಲವು ಅಂಶಗಳನ್ನು ಹೊರಗೆಡಹಿದರು.

'ಅಯ್ಯೋ, ಇಲ್ಲ ಸಾರ್, ಕುತ್ತಿಗೆ ಹಿಚುಕಿದ್ದು ಡಾಕ್ಟ್ರೇ ಇರ್ಬೋದು. ವಿಚಾರ್ಸಿ ಸಾ...' ಎನ್ನುತ್ತಿದ್ದಂತೆಯೇ ಸಬ್‌ಇನ್ಸ್‌ಪೆಕ್ಟರ್, 'ಲೌಡಿ ಮಗನೆ, ನಿಜ ಹೇಳ್ಳಿಕ್ಕೆ ಸಂಕಟವೇನೊ' ಅನ್ನುತ್ತ ಆತನನ್ನು ನಖಶಿಖಾಂತ ತದಕಿದರು. ನಟರಾಜ್ ಹೊರಗೆ ಬಂದು ನಿಂತುಕೊಂಡು ಯೋಚನಾಮಗ್ನರಾದರು.

(ಸಶೇಷ)